Spl. C 19/2022
PW: 02
CW: 06

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

## SPECIAL CASE : 19/2022

**ಪ್ರಾ.ಸಾ. 02**

**ದೋ.ಸಾ. 06**

| | | |
|---|---|---|
| ಸಾಕ್ಷಿಯ ಹೆಸರು | : | ಮಂಜುನಾಥ |
| ತಂದೆಯ ಹೆಸರು | : | ವೆಂಕಟರಾಯಪ್ಪ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ | : | ಹೊಸಹಳ್ಳಿ ಗ್ರಾಮ |

**ದಿನಾಂಕ 16.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1). ಚಾಸಾ-5 ಶಿವಪ್ಪ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು, ಅವರು ನಮ್ಮ ಊರಿನವರು.

2). ಈಗ ಸಾಕ್ಷಿಗೆ ದಿನಾಂಕಃ22-08-2021ರ ಕೃತ್ಯ ನಡೆದ ಸ್ಥಳ ಪಂಚನಾಮೆಯನ್ನು ತೋರಿಸಿದ್ದು, ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ-5 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 3 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಮೊಬೈಲನ್ನು ಕಳೆದುಹೋದ ವಿಚಾರವಾಗಿ ನಾನು ಪೊಲೀಸ್ ಠಾಣೆಗೆ ಹೋಗಿದ್ದು, ಆಗ ಪೊಲೀಸರು ನಿಪಿ-5ಕ್ಕೆ ನನ್ನ ಸಹಿಯನ್ನು ಪಡೆದುಕೊಡಿಂರುತ್ತಾರೆ. ನಿಪಿ-5ರಲ್ಲಿ ಏನು ಬರೆದಿದೆ ಎಂದುನನಗೆ ಗೊತ್ತಿಲ್ಲ. ನನ್ನ ಜೊತೆ ನಿಪಿ-5ಕ್ಕೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಯಾರ ಜಮೀನಿಗೂ ಹೋಗಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು.)**

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

3). ದಿನಾಂಕ 22.08.2021 ರಂದು ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆಯ ಎಎಸ್ಐ ಶ್ರೀ ನಾರಾಯಣಸ್ವಾಮಿರವರು ಎ.ಹೊಸಹಳ್ಳಿ ಗ್ರಾಮದ ಆವುಲರೆಡ್ಡಿ ಬಿನ್ ನಾರಾಯಣಸ್ವಾಮಿರವರ ಬಾಬ್ತು ಸರ್ವೆ ನಂಬರ್ 17 ರ ಜಮೀನಿನ ಪೂರ್ವ ದಿಕ್ಕಿನಲ್ಲಿ ಹಾಗಲಕಾಯಿ ತೋಟದ ಕೊನೆಯ ಬದಿಯಲ್ಲಿ ಗಾಂಜಾ ಗಿಡ ಬೆಳೆದಿರುವುದಾಗಿ ಬಂದ ಮಾಹಿತಿ ಮೇರೆಗೆ, ಸದರಿಯವರು ಮುಂದಿನ ಕ್ರಮಕ್ಕಾಗಿ ನನ್ನನ್ನು ಹಾಗೂ ಚಾಸಾ-5 ಶಿವಪ್ಪರವರನ್ನು ಪಂಚರಾಗಿ ಬರಮಾಡಿಕೊಂಡು ಈ ಕೇಸಿನ ಸಾರಾಂಶವನ್ನು ನಮಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸದರಿ ಪಂಚನಾಮೆ ಕ್ರಮಕ್ಕೆ ಸಹಕರಿಸಲು ನಮ್ಮನ್ನು ಕೋರಿದ್ದು, ಅದಕ್ಕೆ ನಾವು ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಹಾಜರಿದ್ದ ಈ ಕೇಸಿನ ಆರೋಪಿ ವೆಂಕಟರಮಣರೆಡ್ಡಿ ಬಿನ್ ಪೆದ್ದಣ್ಣರವರಿಗೆ ಗಾಂಜಾ ಗಿಡಗಳನ್ನು ಅಮಾನತ್ತುಪಡಿಸುವ ಸಲುವಾಗಿ ಸದರಿ ಸ್ಥಳವನ್ನು ತೋರಿಸುವಂತೆ ಪೊಲೀಸರು ಕೇಳಿದಾಗ, ಸದರಿಯವರು ಮುಂದೆ ಬಂದು ತಾನು ಕಾನೂನು ಬಾಹಿರವಾಗಿ ಸರ್ಕಾರದಿಂದ ಯಾವುದೇ ಪರವಾನಿಗೆ ಪಡೆಯದೇ ನಾಲ್ಕು ಗಾಂಜಾ ಗಿಡಗಳನ್ನು ಉದ್ದೇಶಪೂರಕವಾಗಿ ಬೆಳೆದಿರುವುದಾಗಿ ತಿಳಿಸಿ ಹಾಗೆಯೇ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸದರಿ ಸ್ಥಳವನ್ನು ನಮ್ಮ ಸಮಕ್ಷಮ ಪೊಲೀಸರು ಅಜಮಾಯಿಷಿ ಮಾಡಲಾಗಿ, ಸದರಿ ಸ್ಥಳವು ಚಿಂತಾಮಣಿ ತಾಲ್ಲೂಕು, ಎ.ಹೊಸಹಳ್ಳಿ ಗ್ರಾಮದ ಈ ಕೇಸಿನ ಆರೋಪಿಯ ಮಾವನಾದ ಆವುಲರೆಡ್ಡಿರವರ ಬಾಬ್ತು ಸರ್ವೆ ನಂಬರ್ 17 ರಲ್ಲಿ 2 ಎಕರೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಹಾಗಲಕಾಯಿ ಬೆಳೆ

Spl. C 19/2022
PW: 02
CW: 06

ಹಾಕಿದ್ದು, ಪೂರ್ವ ದಿಕ್ಕಿನ ಕೊನೆಯ ಬದಿಯಲ್ಲಿ ಗಾಂಜಾಗಿಡಗಳನ್ನು ಬೆಳೆಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಗಾಂಜಾ ಗಿಡಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಶೆಡ್ಡಿನಲ್ಲಿ ಇಟ್ಟಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ನನ್ನ ಸಮಕ್ಷಮ ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ನಿಪಿ–5 ರಂತೆ ಪೊಲೀಸರು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಆರ್.ಕೆ ವಕೀಲರಿಂದಃ ಇಲ್ಲ.**

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-
**(ಎನ್.ವಿ. ಭವಾನಿ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.